# ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ

ನಂ.4, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

**ಕ್ರಮ ಸಂಖ್ಯೆ: ಕರಾಸಗ್ರಾಮ/ಆಡಳಿತ/ನೇ.ನೇ/01/2025–26** **ದಿನಾಂಕ : 08.01.2026**

## : ನೇಮಕಾತಿ ಪ್ರಕಟಣೆ :

ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ (ನಿ)., ಬೆಂಗಳೂರು ಈ ಸಂಸ್ಥೆಯಲ್ಲಿ ಖಾಲಿ ಇರುವ ಈ ಕೆಳಕಂಡ ವಿವಿಧ ವೃಂದದ ಒಟ್ಟು **34** ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್–ಲೈನ್ **(ON-LINE)** ಮುಖಾಂತರ ಆಹ್ವಾನಿಸಲಾಗಿದೆ.

**ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ (ನಿ)., ಬೆಂಗಳೂರು** ಇದರ ಅಧಿಕೃತ ವೆಬ್ ಸೈಟ್ **https://virtualofficeerp.com/ksccf2026** ನಲ್ಲಿ ನೀಡಿರುವ ಲಿಂಕ್ ಮುಖಾಂತರ ಅರ್ಹ ಅಭ್ಯರ್ಥಿಗಳು ಆನ್–ಲೈನ್ ಮುಖಾಂತರವೇ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ನಿಗದಿತ ಅರ್ಜಿ ಶುಲ್ಕವನ್ನು ಆನ್–ಲೈನ್ ಮುಖಾಂತರವೇ ಪಾವತಿಸತಕ್ಕದ್ದು.

**ಅರ್ಜಿಗಳನ್ನು ಖುದ್ದಾಗಿ / ಅಂಚೆ / ಕೋರಿಯರ್ ಇತ್ಯಾದಿಗಳ ಮೂಲಕ ಸಲ್ಲಿಸಲು ಅವಕಾಶ ಇರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.**

**: ನೇರ ನೇಮಕಾತಿಗೆ ಪರಿಗಣಿಸಲಾಗಿರುವ ಹುದ್ದೆಗಳ ವಿವರ / ಮೀಸಲಾತಿ ಈ ಕೆಳಕಂಡಂತೆ ಇರುತ್ತದೆ :**

| ಕ್ರ. ಸಂ | ಹುದ್ದೆಯ ಹೆಸರು | ವೇತನ ಶ್ರೇಣಿ | ಒಟ್ಟು ಹುದ್ದೆಗಳು | ಮೀಸಲಾತಿ ವರ್ಗೀಕರಣ | ಒಳಮೀಸಲಾತಿ | | | | |
|---|---|---|---|---|---|---|---|---|---|
| **1.** | **ಫಾರ್ಮಾಸಿಸ್ಟ್** | 25800–52650 | **07** | ರಾಜ್ಯ ಮಟ್ಟದ ಉಳಿಕೆ ವೃಂದದ ಹುದ್ದೆಗಳು | **ಒಟ್ಟು** | **ಇತರೆ** | **ಮ.ಅ** | **ಗ್ರಾ.ಅ** | **ವಿ.ಚೇ.ಅ** |
| | | | | ಸಾಮಾನ್ಯ | 03 | 01 | 01 | 01 | -- |
| | | | | ಪ.ಜಾ ಪ್ರ–ಎ | 01 | 01 | -- | -- | -- |
| | | | | ಪ.ಪಂ | 01 | 01 | -- | -- | -- |
| | | | | ಪ್ರ–1 | 01 | 01 | -- | -- | -- |
| | | | | ಪ್ರ–2ಎ | 01 | 01 | -- | -- | -- |
| | | | | **ಒಟ್ಟು** | **07** | **05** | **01** | **01** | -- |
| **2.** | **ಪ್ರಥಮ ದರ್ಜೆ ಗುಮಾಸ್ತರು** | 21400–45300 | **10** | ರಾಜ್ಯ ಮಟ್ಟದ ಉಳಿಕೆ ವೃಂದದ ಹುದ್ದೆಗಳು | | | | | |
| | | | | ಸಾಮಾನ್ಯ | 05 | 01 | 02 | 01 | 01 |
| | | | | ಪ.ಜಾ ಪ್ರ–ಎ | 01 | 01 | -- | -- | -- |
| | | | | ಪ.ಜಾ ಪ್ರ–ಬಿ | 01 | 01 | -- | -- | -- |
| | | | | ಪ.ಪಂ | 01 | 01 | -- | -- | -- |
| | | | | ಪ್ರ–1 | 01 | 01 | -- | -- | -- |
| | | | | ಪ್ರ–2ಎ | 01 | 01 | -- | -- | -- |
| | | | | **ಒಟ್ಟು** | **10** | **06** | **02** | **01** | **01** |

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 01

| | | | | | | | | | |
|---|---|---|---|---|---|---|---|---|---|
| **3.** | **i.** ವಿಕ್ರಯ ಸಹಾಯಕರು | 19950–37900 | **16** | ರಾಜ್ಯ ಮಟ್ಟದ ಉಳಿಕೆ ವೃಂದದ ಹುದ್ದೆಗಳು | ಒಟ್ಟು | ಇತರೆ | ಮ.ಅ | ಗ್ರಾ.ಅ | ವಿ.ಚೇ.ಅ |
| | | | | ಸಾಮಾನ್ಯ | 08 | 02 | 03 | 02 | 01 |
| | | | | ಪ.ಜಾ ಪ್ರ–ಎ | 01 | 01 | –– | –– | –– |
| | | | | ಪ.ಜಾ ಪ್ರ–ಬಿ | 01 | 01 | –– | –– | –– |
| | | | | ಪ.ಜಾ ಪ್ರ–ಸಿ | 01 | 01 | –– | –– | –– |
| | | | | ಪ.ಪಂ | 01 | 01 | –– | –– | –– |
| | | | | ಪ್ರ–1 | 01 | 01 | –– | –– | –– |
| | | | | ಪ್ರ–2ಎ | 02 | 01 | 01 | –– | –– |
| | | | | ಪ್ರ–2ಬಿ | 01 | 01 | –– | –– | –– |
| | | | | **ಒಟ್ಟು** | **16** | **09** | **04** | **02** | **01** |
| | **ii.** ವಿಕ್ರಯ ಸಹಾಯಕರು | 19950–37900 | **01** | ರಾಜ್ಯ ಮಟ್ಟದ ಕ.ಕ. ವೃಂದದ (371ಜೆ) ಮೀಸಲಿರುವ ಹುದ್ದೆಗಳು | | | | | |
| | | | | ಸಾಮಾನ್ಯ | 01 | 01 | –– | –– | –– |
| | | | | **ಒಟ್ಟು** | **01** | **01** | –– | –– | –– |

ಮಹಿಳೆ / ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತಸ್ಥಾನಗಳನ್ನು ಆಯಾಯ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**ಮೀಸಲಾತಿಗೆ ಸಂಬಂಧಿಸಿದಂತೆ ಮೇಲಿನ ಅಂಕಣದಲ್ಲಿ ನಮೂದಿಸಿರುವ ಮೀಸಲಾತಿ ವಿವರಣೆಗಳನ್ನು ಕೆಳಕಂಡಂತೆ ಅರ್ಥೈಸಿಕೊಳ್ಳುವುದು.**

| | | | | | |
|---|---|---|---|---|---|
| ಪ.ಜಾ ಪ್ರ–ಎ | : | ಪರಿಶಿಷ್ಟ ಜಾತಿ ಪ್ರವರ್ಗ–ಎ | ಪ್ರ–3ಎ | : | ಪ್ರವರ್ಗ–3ಎ |
| ಪ.ಜಾ ಪ್ರ–ಬಿ | : | ಪರಿಶಿಷ್ಟ ಜಾತಿ ಪ್ರವರ್ಗ–ಬಿ | ಪ್ರ–3ಬಿ | : | ಪ್ರವರ್ಗ–3ಬಿ |
| ಪ.ಜಾ ಪ್ರ–ಸಿ | : | ಪರಿಶಿಷ್ಟ ಜಾತಿ ಪ್ರವರ್ಗ–ಸಿ | ಸಾ.ಅ | : | ಸಾಮಾನ್ಯ ಅಭ್ಯರ್ಥಿ |
| ಪ.ಪಂ | : | ಪರಿಶಿಷ್ಟ ಪಂಗಡ | ಮ.ಅ | : | ಮಹಿಳಾ ಅಭ್ಯರ್ಥಿ |
| ಪ್ರ–1 | : | ಪ್ರವರ್ಗ–1 | ಗ್ರಾ.ಅ | : | ಗ್ರಾಮೀಣ ಅಭ್ಯರ್ಥಿ |
| ಪ್ರ–2ಎ | : | ಪ್ರವರ್ಗ–2ಎ | ವಿ.ಚೇ.ಅ | : | ವಿಕಲಚೇತನ ಅಭ್ಯರ್ಥಿ |
| ಪ್ರ–2ಬಿ | : | ಪ್ರವರ್ಗ–2ಬಿ | ಇತರೆ | : | ಇತರೆ ಅಭ್ಯರ್ಥಿ |

**371(ಜೆ) ಮೀಸಲಾತಿ :** ಕಲ್ಯಾಣ ಕರ್ನಾಟಕ ವೃಂದದಲ್ಲಿ ಮೀಸಲಿರಿಸಿದ ಹುದ್ದೆಗಳು.
**ಉಳಿಕೆ ವೃಂದ :** ರಾಜ್ಯ ಮಟ್ಟದ ಉಳಿಕೆ ವೃಂದ (371ಜೆ ಹೊರತುಪಡಿಸಿ).

ವ್ಯವಸ್ಥಾಪಕ ನಿರ್ದೇಶಕರು
**MANAGING DIRECTOR**
Karnataka State Co-operative
Consumers Federation Ltd.
Chamarajpet, Bangalore-560 018

## 1) ವಿದ್ಯಾರ್ಹತೆ :

ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2017 ರ ನಿಯಮ 17(ಎ) ಮತ್ತು ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ ಬೆಂಗಳೂರು ಇದರ ಪೂರಕ ನಿಯಮಗಳಲ್ಲಿ ವಿವಿಧ ಹುದ್ದೆಗಳಿಗನುಗುಣವಾಗಿ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ | ಹುದ್ದೆಯ ಹೆಸರು | ವಿದ್ಯಾರ್ಹತೆ |
|---|---|---|
| 1. | ಫಾರ್ಮಾಸಿಸ್ಟ್ | 1. ಸರ್ಕಾರದ ಅಂಗೀಕೃತ ಸಂಸ್ಥೆಯಿಂದ ಡಿಪ್ಲೋಮಾ ಇನ್ ಫಾರ್ಮಾಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>2. ಕಂಪ್ಯೂಟರ್ ಅಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನ ಹೊಂದಿರಬೇಕು.<br>3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| 2 | ಪ್ರಥಮ ದರ್ಜೆ ಗುಮಾಸ್ತರು | 1. ಭಾರತದ ಕಾನೂನಿನಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>2. ಕಂಪ್ಯೂಟರ್ ಅಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನ ಹೊಂದಿರಬೇಕು.<br>3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| 3 | ವಿಕ್ರಯ ಸಹಾಯಕರು | 1. ದ್ವಿತೀಯ ಪಿಯುಸಿಯಲ್ಲಿ ತೇರ್ಗಡೆಯಾಗಿರಬೇಕು.<br>2. ಕಂಪ್ಯೂಟರ್ ಅಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನ ಹೊಂದಿರಬೇಕು.<br>3. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ವಚ್ಚವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet, Bengaluru

## 2) ವಯೋಮಿತಿ :

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಈ ಕೆಳಕಂಡ ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| **ವರ್ಗೀಕರಣದ ವಿವರ** | **ಕನಿಷ್ಠ ವಯೋಮಿತಿ** | **ಗರಿಷ್ಠ ವಯೋಮಿತಿ (3 ವರ್ಷಗಳ ವಯೋಮಿತಿ ಸಡಿಲಿಕೆ ಸೇರಿ)** |
|---|---|---|
| ಸಾಮಾನ್ಯ ವರ್ಗ | 18 ವರ್ಷ ತುಂಬಿರಬೇಕು | 35 + 3 = 38 ವರ್ಷ ಮೀರಿರಬಾರದು |
| ಪ್ರವರ್ಗ2ಎ, ಪ್ರವರ್ಗ2ಬಿ, ಪ್ರವರ್ಗ3ಎ, ಪ್ರವರ್ಗ3ಬಿ | 18 ವರ್ಷ ತುಂಬಿರಬೇಕು | 38 + 3 = 41 ವರ್ಷ ಮೀರಿರಬಾರದು |
| ಪ.ಜಾ ಪ್ರ–ಎ/ಪ.ಜಾ ಪ್ರ–ಬಿ/ ಪ.ಜಾ ಪ್ರ–ಸಿ/ಪ.ಪಂ/ಪ್ರವರ್ಗ–1 | 18 ವರ್ಷ ತುಂಬಿರಬೇಕು | 40 + 3 = 43 ವರ್ಷ ಮೀರಿರಬಾರದು |

*** ವಿಶೇಷ ಸೂಚನೆ : ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 262 ಸೇನೆನಿ 2025 ಬೆಂಗಳೂರು, ದಿನಾಂಕ: 29.09.2025 ರನ್ವಯ ನೇರ ನೇಮಕಾತಿ ಪ್ರಕಟಣೆಯಡಿಯಲ್ಲಿ ಮಹಾಮಂಡಳಕ್ಕೆ ಅರ್ಜಿ ಸಲ್ಲಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ (as one-time measure) 03 (ಮೂರು) ವರ್ಷಗಳ ಸಡಿಲಿಕೆ ನೀಡಲಾಗಿದೆ.**

- ವಿಕಲಚೇತನರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
- ವಿಧವೆಯರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
- ಮಾಜಿ ಸೈನಿಕರಿಗೆ ಮಿಲಿಟರಿ ಸೇವೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ.

## 3) ಅರ್ಜಿ ಶುಲ್ಕ :

| | |
|---|---|
| ಪ.ಜಾತಿ ಪ್ರ–ಎ/ ಪ.ಜಾತಿ ಪ್ರ–ಬಿ/ ಪ.ಜಾತಿ ಪ್ರ–ಸಿ/ ಪ.ಪಂ / ಪ್ರ–1 ಮತ್ತು ವಿಕಲಚೇತನ ಅಭ್ಯರ್ಥಿಗಳಿಗೆ | **ರೂ. 500–00ಗಳು (+GATE WAY CHARGES)** |
| ಇತರೆ ವರ್ಗದ ಅಭ್ಯರ್ಥಿಗಳಿಗೆ | **ರೂ. 1,000–00ಗಳು (+GATE WAY CHARGES)** |

## 4) ಅರ್ಜಿ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ :

| | | |
|---|---|---|
| ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | : | **09/01/2026** |
| ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ | : | **07/02/2026** |

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd,
Chamarajpet, Bangalore

## 5) ಸೂಚನೆಗಳು :

1. ಈ ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಯಾಗಬಹುದಾಗಿದ್ದು, ನೇಮಕಾತಿ ಪ್ರಾಧಿಕಾರವು ಬದಲಾವಣೆ ಮಾಡುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.

2. **ಅರ್ಜಿಗಳನ್ನು ಆನ್‌–ಲೈನ್ (ON-LINE) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು.** ಅರ್ಜಿಗಳನ್ನು ಕೋರಿಯರ್ / ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಆ ರೀತಿ ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

3. ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ, ಅಂತಹ ಅಭ್ಯರ್ಥಿಗಳು ಒಂದೇ ನೋಂದಣಿ ಸಂಖ್ಯೆಯಡಿಯಲ್ಲಿಯೇ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ, ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.

4. ಅಭ್ಯರ್ಥಿಗಳು ಅರ್ಜಿಯನ್ನು WEB SITEನಲ್ಲಿ ತಿಳಿಸಿರುವ ಸೂಚನೆಗಳನ್ವಯ ಮಾತ್ರ ಭರ್ತಿ ಮಾಡತಕ್ಕದ್ದು.

5. ಆನ್‌–ಲೈನ್ (ON-LINE) ಮೂಲಕ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಅಪ್‌ಲೋಡ್ ಮಾಡಬೇಕಾದ ಪ್ರಮಾಣ ಪತ್ರಗಳು / ದಾಖಲಾತಿಗಳನ್ನು ಸ್ಪಷ್ಟವಾಗಿ ಕಾಣುವಂತೆ ಮತ್ತು ಓದಲು ಸಾಧ್ಯವಾಗುವಂತೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು. ಸ್ಪಷ್ಟತೆ ಇಲ್ಲದೆ ಇರುವ ದಾಖಲಾತಿಗಳನ್ನು ಅಪ್ ಲೋಡ್ ಮಾಡಿದ್ದಲ್ಲಿ ಅಂಥಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

6. ಅಭ್ಯರ್ಥಿಗಳು ಅಪೂರ್ಣ / ಅಸ್ಪಷ್ಟ / ತಪ್ಪು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

7. ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ, ಮೊಬೈಲ್ ನಂಬರ್ ಮತ್ತು ಇ–ಮೇಲ್ ಐ.ಡಿ.ಗಳ ಮೂಲಕವೇ ಸಂಪರ್ಕಿಸಲಾಗುವುದು.

8. ಸಂಸ್ಥೆಯು ಅಭ್ಯರ್ಥಿಯೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸುವುದಿಲ್ಲ.

9. ನಿಗದಿತ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ವಾಪಸ್ಸು ಮಾಡಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

**6) ಅಭ್ಯರ್ಥಿಗಳು ಆನ್–ಲೈನ್ (ON-LINE) ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಈ ಕೆಳಕಂಡ ಅಂಶಗಳನ್ನು ತಿಳಿದುಕೊಂಡಿರತಕ್ಕದ್ದು.**

**ಹಂತ : (i)** ಅಭ್ಯರ್ಥಿಗಳು ಮಹಾಮಂಡಳದ ಅಧಿಕೃತ **WEB SITE** **https://virtualofficeerp.com/ksccf2026** ಅನ್ನು ಒತ್ತಿದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **KSCCF RECURITMENT 2026** ಎಂದು ಮೂಡುತ್ತದೆ ಮತ್ತು ಅಧಿಸೂಚನೆ / ಸೂಚನೆಗಳನ್ನು ಕಡ್ಡಾಯವಾಗಿ ಓದತಕ್ಕದ್ದು. ಅಂತಿಮವಾಗಿ ನಿಯಮ ಮತ್ತು ಷರತ್ತುಗಳನ್ನು ಕೆಳಗಿನ ಚೆಕ್ ಬಾಕ್ಸ್ ಅನ್ನು ಒತ್ತುವ ಮೂಲಕ ಒಪ್ಪಿಕೊಳ್ಳತಕ್ಕದ್ದು ಹಾಗೂ **NEW REGISTRATION** ಗುಂಡಿಯನ್ನು ಒತ್ತಿ ಮುಂದುವರಿಯುವುದು.

**ಹಂತ : (ii)** ಸಂಬಂಧಪಟ್ಟ ಹುದ್ದೆಯನ್ನು ಆಯ್ಕೆ ಮಾಡಿ **APPLY** ಗುಂಡಿಯನ್ನು ಒತ್ತಿ ಅರ್ಜಿಗಳನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿಕೊಂಡು, ಎಲ್ಲಾ ವಿವರಗಳು ಸರಿಯಾಗಿರುತ್ತವೆ ಎಂದು ಖಚಿತ ಪಡಿಸಿಕೊಂಡ ನಂತರವೇ **PREVIEW** ಗುಂಡಿಯನ್ನು ಒತ್ತಿ ಮುಂದುವರಿಯುವುದು.

**ಹಂತ : (iii)** ಅರ್ಜಿಯ ಯಾವುದೇ ವಿವರಗಳ ಬದಲಾವಣೆ ಅಗತ್ಯವಿದ್ದರೆ ಪೂರ್ವದರ್ಶನ ಪುಟದಲ್ಲಿ **EDIT** ಗುಂಡಿಯನ್ನು ಒತ್ತಿ ನಿಮ್ಮ ಅರ್ಜಿಯಲ್ಲಿನ ಮಾಹಿತಿಗಳನ್ನು ಸರಿಪಡಿಸಿಕೊಂಡು ವಿವರಗಳು ಸರಿ ಇರುವುದನ್ನು ಖಚಿತಪಡಿಸಿಕೊಂಡು, ನಿಮ್ಮ ಸಹಿಯೊಂದಿಗಿನ ಪಾಸ್ ಪೋರ್ಟ್ ಗಾತ್ರದ ಸ್ಕ್ಯಾನ್ ಮಾಡಿದ ಭಾವ ಚಿತ್ರವನ್ನು ಅಪ್ ಲೋಡ್ ಮಾಡುವ ಬಗ್ಗೆ **NEXT** ಗುಂಡಿಯನ್ನು ಒತ್ತುವುದು.

**NOTE :** ಈ ಹಂತದಲ್ಲಿ ಅಭ್ಯರ್ಥಿಯು ಕಂಪ್ಯೂಟರ್ ಪರದೆಯ ಮೇಲೆ ಮೂಡಲಾದ **REGISTRATION ID** ಯನ್ನು ತಪ್ಪದೇ ಬರೆದಿಟ್ಟುಕೊಳ್ಳಬೇಕು. ಅಭ್ಯರ್ಥಿಯು ನೋಂದಾಯಿಸಿದ **E-MAIL / MOBILE** ವಿಳಾಸಕ್ಕೆ ಒಂದು ಸ್ವಯಂ ಚಾಲಿತ **E-MAIL / MOBILE** ಮೂಲಕ **REGISTRATION ID** ಮತ್ತು **PASSWORD** ಅನ್ನು ಕಳುಹಿಸಲಾಗುವುದು.

ಅಭ್ಯರ್ಥಿಯು **EDIT APPLICATION** ಗುಂಡಿಯನ್ನು ಒತ್ತಿ, ಅವರ **REGISTRATION ID** ಮತ್ತು **NEXT PASSWORD** ಅನ್ನು ಬಳಸಿ ತಮ್ಮ ವಿವರಗಳನ್ನು ಅಪ್ ಲೋಡ್ ಮಾಡಬಹುದು ಅಥವಾ ಅಪ್ ಲೋಡ್ ಮಾಡಿದ ಮಾಹಿತಿಯನ್ನು ಬದಲಾಯಿಸಬಹುದು. ಅಭ್ಯರ್ಥಿಯು ತಾನು ಅಪ್ ಲೋಡ್ ಮಾಡಿದ ಎಲ್ಲಾ ಮಾಹಿತಿಗಳನ್ನು ಖಚಿತ ಪಡಿಸಿಕೊಂಡ ನಂತರವೇ **NEXT** ಗುಂಡಿಯನ್ನು ಒತ್ತುವುದು.

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 0..

**ಹಂತ : (iv)** ಅಭ್ಯರ್ಥಿಯು ಸ್ವ-ಸಹಿಯೊಂದಿಗೆ ಸ್ಕ್ಯಾನ್ ಮಾಡಿದ ಪಾಸ್ ಪೋರ್ಟ್ ಗಾತ್ರದ ಭಾವಚಿತ್ರವನ್ನು ಆಯ್ಕೆ ಮಾಡುವ ಬಗ್ಗೆ **BROWSE** ಗುಂಡಿಯನ್ನು ಒತ್ತಿ ಮತ್ತು ತಮ್ಮ ಸಹಿಯೊಂದಿಗೆ ಭಾವಚಿತ್ರವನ್ನು ಪೂರ್ವದರ್ಶನ ಮಾಡಲು **SUBMIT** ಗುಂಡಿಯನ್ನು ಒತ್ತಿ, ಒಂದು ವೇಳೆ ತಪ್ಪಾದ ಭಾವಚಿತ್ರವನ್ನು ಅಪ್ ಲೋಡ್ ಮಾಡಿದ್ದಲ್ಲಿ, ಮೇಲಿನ ಕ್ರಮವನ್ನು ಪುನರಾವರ್ತಿಸಿ ಮುಂದಿನ ಪುಟದ ಬಗ್ಗೆ **NEXT** ಗುಂಡಿಯನ್ನು ಒತ್ತಿದರೆ ಅರ್ಜಿಯಲ್ಲಿನ ಯಾವುದೇ ವಿವರವನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವನ್ನು ಖಾಲಿ ಬಿಳಿ ಕಾಗದದ ಮೇಲೆ ಇರಿಸಿ, ಕಪ್ಪು, ಮಾರ್ಕರ್ ಪೆನ್ನಿನಿಂದ ಭಾವಚಿತ್ರದ ಕೆಳಗೆ ಸಹಿ ಮಾಡಿರುವುದನ್ನು ಮತ್ತು ಅಂಕಣದೊಳಗೆ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು.

| | | |
|---|---|---|
| ಕಡತ ಗಾತ್ರ >10ಕೆ.ಬಿ.<50ಕೆ.ಬಿ. | | ಪಾಸ್ ಪೋರ್ಟ್ ಭಾವಚಿತ್ರ ಮತ್ತು ಸಹಿ |
| ಬಣ್ಣ | | ಭಾವಚಿತ್ರ |
| ಜೆಪಿಜಿ/ಜೆಪಿಇಜಿ | | ಸಹಿ |
| | | |

**ಪಾಸ್ ಪೋರ್ಟ್ ಭಾವಚಿತ್ರದ ಅಳತೆಗಳು : 45 ಎಂ.ಎಂ (ಉದ್ದ) X 35 ಎಂ.ಎಂ (ಅಗಲ)**

**ಸಹಿ ಅಳತೆ : 20 ಎಂ.ಎಂ (ಉದ್ದ) X 35 ಎಂ.ಎಂ (ಅಗಲ)**

ಅಭ್ಯರ್ಥಿಯು **PHOTO UPLOAD** ಗುಂಡಿಯನ್ನು ಒತ್ತಿ ಅವರ **REGISTRATION ID** ಅನ್ನು ಮತ್ತು **PASSWORD** ಬಳಸಿ, ತಮ್ಮ ಸಹಿಯೊಂದಿಗೆ ಭಾವಚಿತ್ರವನ್ನು ಅಪ್ ಲೋಡ್ ಮಾಡಬಹುದು ಅಥವಾ ತಪ್ಪಾದಲ್ಲಿ ಅದನ್ನು ಬದಲಾಯಿಸಬಹುದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಮತ್ತು ಸಹಿಯನ್ನು ಅಪ್ ಲೋಡ್ ಮಾಡದಿದ್ದರೆ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಹಂತ : (v)** ಅಭ್ಯರ್ಥಿಗಳು ಸಂಬಂಧಪಟ್ಟ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್ / ವರ್ಷಗಳ ಅಂಕ ಪಟ್ಟಿಗಳು, ಕಂಪ್ಯೂಟರ್ ಪ್ರಮಾಣ ಪತ್ರಗಳು, ನೀರಾಕ್ಷೇಪಣಾ ಪ್ರಮಾಣ ಪತ್ರ, ಮೀಸಲಾತಿ ಜಾತಿ ಪ್ರಮಾಣ ಪತ್ರ, ವಿಕಲಚೇತನ ದೃಢೀಕರಣ ಪತ್ರ, ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ, ಜನ್ಮ ದಿನಾಂಕಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳ ಜೆರಾಕ್ಸ್ ಪ್ರತಿಗಳಿಗೆ **ಸ್ವಯಂ ದೃಢೀಕರಿಸಿ (SELF ATTESTATION)** ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ **UPLOAD** ಮಾಡತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 0..

ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡಾವಾರು ಅಂಕಗಳಿಗೆ ಪರಿವರ್ತಿಸಿ ಶಾಲಾ / ಕಾಲೇಜ್ / ವಿಶ್ವವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡಾವಾರು ಅಂಕಗಳನ್ನು ತಪ್ಪದೇ ನಮೂದಿಸತಕ್ಕದ್ದು.

ಅರ್ಜಿಯೊಂದಿಗೆ **UPLOAD** ಮಾಡುವ ಪ್ರಮಾಣ ಪತ್ರಗಳು / ದಾಖಲಾತಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ: 07/02/2026 ರೊಳಗೆ ಪಡೆದಿರತಕ್ಕದ್ದು ಹಾಗೂ ಸಿಂಧುವಾಗಿರಬೇಕು.

**ಹಂತ : (vi)** ಅರ್ಜಿ ಶುಲ್ಕ ಹಾಗೂ ಅನ್ವಯಿಸುವ ಸೇವಾ ಶುಲ್ಕವನ್ನು PAYMENT GATEWAY ಲಿಂಕ್ ಬಳಸಿ ಪಾವತಿಸತಕ್ಕದ್ದು.

ಅರ್ಜಿ ಶುಲ್ಕವನ್ನು **NET BANKING, CREDIT CARD, DEBIT CARD, UPI** ಮುಖಾಂತರ ಪಾವತಿಸತಕ್ಕದ್ದು. ಅರ್ಜಿ ಶುಲ್ಕವನ್ನು ನಿಗದಿ ಪಡಿಸಿದ ಕೊನೆಯ ದಿನಾಂಕ: 07/02/2026ರ ರಾತ್ರಿ 11.59ರ ಒಳಗಾಗಿ ಪಾವತಿಸತಕ್ಕದ್ದು.

ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ನೇಮಕಾತಿಗಳಿಗೆ ಹೊಂದಾಣಿಕೆಮಾಡಿಕೊಳ್ಳಲಾಗುವುದಿಲ್ಲ.

ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಮೂಲಕ ಅರ್ಜಿ ಶುಲ್ಕ ಪಾವತಿಸಲು ಅವಕಾಶ ಇರುವುದಿಲ್ಲ.

**ಹಂತ : (vii)** ಅರ್ಜಿಯ ಮುದ್ರಣವನ್ನು ಪಡೆಯಲು **PRINT APPLICATION** ಗುಂಡಿಯನ್ನು ಒತ್ತಿದ ನಂತರವೇ **APPLICATION PREVIEW** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು **DOWNLOAD** ಮಾಡಿಕೊಳ್ಳತಕ್ಕದ್ದು. ಸಂಸ್ಥೆಯು ಅಪೇಕ್ಷಿಸಿದಾಗ ಈ ಪ್ರತಿಗಳನ್ನು ಹಾಜರುಪಡಿಸಬೇಕು.

**ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (HELP LINE) ನಂಬರ್ 9036072155 ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದು (ವೇಳೆ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆಯವರೆಗೆ)**

## 7) ನೇಮಕಾತಿಗೆ ಅರ್ಹತೆಗಳು :

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಅಭ್ಯರ್ಥಿಯು ಮಾನಸಿಕವಾಗಿ ಹಾಗೂ ದೈಹಿಕವಾಗಿ ಆರೋಗ್ಯವಂತನಾಗಿರಬೇಕು. ದೈಹಿಕವಾಗಿ ಅನರ್ಹತೆ ಹೊಂದಿರುವ ಬಗ್ಗೆ ವೈದ್ಯಕೀಯ ಮಂಡಳಿ ವರದಿ ಆಧರಿಸಿ ಅನರ್ಹನೆಂದು ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆ ಕಾಯ್ದಿರಿಸಿಕೊಂಡಿದೆ.
3. ಅಭ್ಯರ್ಥಿಯು ನೇಮಕಾತಿ ಹೊಂದುವ ಹುದ್ದೆ ನಿರ್ವಹಿಸಲು ಸಮರ್ಥನಾಗಿರಬೇಕು.
4. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಮೇಲ್ಕಂಡ ಅರ್ಹತೆಗಳನ್ನು ಹೊಂದಿರತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

## 8) ನೇಮಕಾತಿಗೆ ಅನರ್ಹತೆಗಳು :

ಯಾವುದೇ ವ್ಯಕ್ತಿಯು :

1. ಭಾರತದ ನಾಗರೀಕನಲ್ಲದಿದ್ದರೆ.
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ.
3. ಕಾನೂನು ಭಂಗ ಮಾಡಿ ಹಿಂಸಾ ಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
4. ಭಾರತ ದೇಶದ ಸಾರ್ವಭೌಮತೆಗೆ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಛಾಟನೆಗೊಂಡಿದ್ದಲ್ಲಿ.
6. ವ್ಯಕ್ತಿಯು ನ್ಯಾಯಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ.
7. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಹಾಗೂ ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಿರುವುದಿಲ್ಲ.
8. ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪರಾಧಗಳಿಗೆ ಶಿಕ್ಷೆಗೆ ಗುರಿಯಾಗಿದ್ದರೆ.
9. ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಶಾಸನಬದ್ಧ ನಿಗಮದ ಅಥವಾ ಸಾರ್ವಜನಿಕ ಉದ್ಯಮಗಳ ಅಥವಾ ಸಹಕಾರ ಉದ್ಯಮಗಳ ಅಥವಾ ಸ್ಥಳೀಯ ಸಂಸ್ಥೆಗಳ ಅಥವಾ ಸಹಕಾರ ಸಂಘಗಳ ಅಥವಾ ಬೇರಾವುದೇ ಸಂಸ್ಥೆಯ ನೌಕರನಾಗಿದ್ದು, ಅವುಗಳ ಸೇವೆಯಿಂದ ವಜಾ ಮಾಡಲ್ಪಟ್ಟಿದ್ದರೆ.
10. ಕೇಂದ್ರ ಅಥವಾ ಯಾವುದೇ ರಾಜ್ಯದ ಲೋಕಸೇವಾ ಆಯೋಗ ಅಥವಾ ಸ್ವಾಯತ್ತ / ನೇಮಕಾತಿ ಸಮಿತಿಗಳು ನಡೆಸುವ ಆಯ್ಕೆ ಅಥವಾ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಖಾಯಂ ಆಗಿ ಬಹಿಷ್ಕೃತನಾಗಿದ್ದರೆ ಅಥವಾ ಅನರ್ಹತೆ ಹೊಂದಿದ್ದರೆ.
11. ಸಕ್ಷಮ ನ್ಯಾಯಾಲಯದಿಂದ ದಿವಾಳಿಯೆಂದು ಘೋಷಿಸಲ್ಪಟ್ಟ ವ್ಯಕ್ತಿ ಅಥವಾ ಅನನ್ಮುಕ್ತ ದಿವಾಳಿ ಆಗಿದ್ದರೆ.
12. ನಿಷೇಧಿತ ಸಂಘ / ಸಂಸ್ಥೆಯ ಸದಸ್ಯನಾಗಿ ಅಂತಹ ನಿಷೇಧಿತ ಸಂಘ / ಸಂಸ್ಥೆಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumer Federation Ltd,
Chamarajpet Bangalore-560 018

## 9) ಆಯ್ಕೆ ವಿಧಾನ :

**ON-LINE** ಮುಖಾಂತರ ಸ್ವೀಕರಿಸಲಾದ ಅರ್ಜಿಗಳನ್ನು, ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ ಹಾಗೂ ಅಗತ್ಯ ದಾಖಲಾತಿಗಳ ಆಧಾರದ ಮೇಲೆ ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ ಸರ್ಕಾರವು ಸೂಚಿಸಲಾಗಿರುವ ಬಾಹ್ಯ ಮೂಲ ಸಂಸ್ಥೆಗಳಿಂದ ಲಿಖಿತ ಪರೀಕ್ಷೆ ನಡೆಸಲಾಗುವುದು. ಹುದ್ದೆಗಳಿಗೆ ನಿಗದಿ ಪಡಿಸಿದ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಆಧಾರದ ಮೇಲೆ **1:5ರ** ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. **ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳು 15.** ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಪಡೆಯಲಾದ ಒಟ್ಟು ಅಂಕಗಳ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಒಂದು ಅರ್ಹತಾ ಪಟ್ಟಿಯನ್ನು (ಮೆರಿಟ್) ತಯಾರಿಸಲಾಗುವುದು.

ಅರ್ಹತಾ (ಮೆರಿಟ್) ಪಟ್ಟಿಯ ಆಧಾರದ ಮೇಲೆ ಕರ್ನಾಟಕ ಸರ್ಕಾರದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುವುದು. ಅಭ್ಯರ್ಥಿಗಳ ಆಯ್ಕೆ ಬಗ್ಗೆ ನೇಮಕಾತಿ ಪ್ರಾಧಿಕಾರದ ನಿರ್ಣಯ ಅಂತಿಮವಾಗಿರುತ್ತದೆ.

## 10) ಲಿಖಿತ ಪರೀಕ್ಷೆ :

ಕೆಳಕಂಡ ವಿಷಯಗಳ ಕುರಿತು **ಫಾರ್ಮಾಸಿಸ್ಟ್, ಪ್ರಥಮ ದರ್ಜೆ ಸಹಾಯಕರು ಮತ್ತು ವಿಕ್ರಯ ಸಹಾಯಕರು** ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುವುದು.

### ಪ್ರಶ್ನೆ ಪತ್ರಿಕೆ

| | | | |
|---|---|---|---|
| 1 | ಕನ್ನಡ ಭಾಷೆ | – | 50 ಅಂಕಗಳು |
| 2 | ಸಾಮಾನ್ಯ ಆಂಗ್ಲ ಭಾಷೆ (General English) | – | 25 ಅಂಕಗಳು |
| 3 | ಸಾಮಾನ್ಯ ಜ್ಞಾನ | – | 25 ಅಂಕಗಳು |
| 4 | ಸಹಕಾರಿ ವಿಷಯ | – | 50 ಅಂಕಗಳು |
| 5 | ಭಾರತದ ಸಂವಿಧಾನ | – | 25 ಅಂಕಗಳು |
| 6 | ಸಮಾಜಯುಕ್ತವಾದ ಚಟುವಟಿಕೆಗಳು ಹಾಗೂ ವಸ್ತುನಿಷ್ಠ ವಿಷಯಗಳು | – | 25 ಅಂಕಗಳು |
| | **ಒಟ್ಟು** | – | **200 ಅಂಕಗಳು** |

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd,
Chamarajpet, Bangalore-560 ...

ಲಿಖಿತ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ ಮತ್ತು ಸಮಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅರ್ಹ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ಪ್ರವೇಶ ಪತ್ರ **(E-CALL LETTERS)**ಗಳನ್ನು ಅಧಿಕೃತ ಜಾಲತಾಣ **https://virtualofficeerp.com/ksccf2026** ರಿಂದ ಡೌನ್‌ಲೋಡ್ ಮಾಡಿಕೊಂಡು, ಲಿಖಿತ ಪರೀಕ್ಷೆಗೆ ಹಾಜರುಪಡಿಸತಕ್ಕದ್ದು.

ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಸಂಸ್ಥೆ ನಿಗದಿಪಡಿಸುವ ಸ್ಥಳಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

## 11) ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು :

ಮೀಸಲಾತಿ ಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದು ಕೊಂಡಿರತಕ್ಕದ್ದು ಮತ್ತು ಚಾಲ್ತಿಯಲ್ಲಿರತಕ್ಕದ್ದು.

| | | |
|---|---|---|
| ಅ) | ಪರಿಶಿಷ್ಟ ಜಾತಿ ಪ್ರವರ್ಗ–ಎ / ಪರಿಶಿಷ್ಟ ಜಾತಿ ಪ್ರವರ್ಗ–ಬಿ / ಪರಿಶಿಷ್ಟ ಜಾತಿ ಪ್ರವರ್ಗ–ಸಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | **ನಮೂನೆ 'ಡಿ'** |
| ಆ) | ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳು | **ನಮೂನೆ 'ಇ'** |
| ಇ) | ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು | **ನಮೂನೆ 'ಎಫ್'** |

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದುಕೊಂಡಿರತಕ್ಕದ್ದು.

ಅಭ್ಯರ್ಥಿಯು ವಿವಿಧ ಮೀಸಲಾತಿ ಕೋರಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳನ್ನು ಹಾಜರುಪಡಿಸದೇ ಇದ್ದಲ್ಲಿ ಅಪೇಕ್ಷಿತ ಮೀಸಲಾತಿ ಪಡೆಯಲು ಅರ್ಹರಾಗುವುದಿಲ್ಲ ಹಾಗೂ ಇಂತಹ ಅಭ್ಯರ್ಥಿಯು ಸಾಮಾನ್ಯ ವರ್ಗದ ಅರ್ಹತೆ ಅಡಿಯಲ್ಲಿ ಅರ್ಹರಾದಲ್ಲಿ ಮತ್ತು ಸಾಮಾನ್ಯ ವರ್ಗಕ್ಕೆ ಅನ್ವಯಿಸುವ ನಿಗದಿತ ಶುಲ್ಕ ಪಾವತಿಸಿದ್ದಲ್ಲಿ ಮಾತ್ರ ಸಾಮಾನ್ಯ ವರ್ಗದ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.

ಸಂದರ್ಶನಕ್ಕೆ ಅರ್ಹತೆ ಹೊಂದಿದ ಅಭ್ಯರ್ಥಿಗಳು ಅರ್ಜಿಯಲ್ಲಿ ಅಪ್‌ಲೋಡ್ (UPLOAD) ಮಾಡಿರುವ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಸಂದರ್ಶನ ಸಮಯದಲ್ಲಿ ತಪ್ಪದೇ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಮೀಸಲಾತಿ ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯ ಅಡಿಯಲ್ಲಿ ಅರ್ಹರಾದಲ್ಲಿ ಮತ್ತು ಸಾಮಾನ್ಯ ವರ್ಗಕ್ಕೆ ಅನ್ವಯಿಸುವ ನಿಗದಿತ ಶುಲ್ಕ ಪಾವತಿಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.

ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಈ ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

## (11.1) ಗ್ರಾಮೀಣ ಅಭ್ಯರ್ಥಿ :

ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು, ಈ ಮೀಸಲಾತಿ ಪಡೆಯಲು ಅರ್ಹರಾಗಿರುತ್ತಾರೆ, ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು ಕ್ಲೈಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2 ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರದ ಜೊತೆಗೆ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದುಕೊಂಡಿರತಕ್ಕದ್ದು.

ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ ಪ್ರವರ್ಗ-ಎ, ಪರಿಶಿಷ್ಟ ಜಾತಿ ಪ್ರವರ್ಗ-ಬಿ, ಪರಿಶಿಷ್ಟ ಜಾತಿ ಪ್ರವರ್ಗ-ಸಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ ಮತ್ತು ಪ್ರವರ್ಗ-3ಬಿ ವರ್ಗದ ಮೀಸಲಾತಿ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದುಕೊಂಡಿರತಕ್ಕದ್ದು.

ಸಂದರ್ಶನಕ್ಕೆ ಅರ್ಹತೆ ಹೊಂದಿದ ಅಭ್ಯರ್ಥಿಗಳು ಸಂದರ್ಶನ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿ ಪಡೆಯಲು ಅನರ್ಹರಾಗುತ್ತಾರೆ.

ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.

## (11.2) ವಿಕಲಚೇತನ ಅಭ್ಯರ್ಥಿ :

ಸರ್ಕಾರದ ಅಧಿಸೂಚನೆಗಳನ್ವಯ ವಿಕಲಚೇತನರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆ ಹೊಂದಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿ ಕೋರಲು ಅರ್ಹರಾಗಿರುತ್ತಾರೆ. ನಿಗದಿ ಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದುಕೊಂಡಿರತಕ್ಕದ್ದು.

ಬೇರೆ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಹಾಗೂ ಗುರುತಿನ ಚೀಟಿಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 0..

ಈ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.

ವಿಕಲಚೇತನ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಲಿಪಿಕಾರರ ಸಹಾಯ ಬೇಕಿದ್ದಲ್ಲಿ, ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು. ಈ ಸಂಬಂಧ ಅರ್ಜಿ ಸಲ್ಲಿಸುವ ಸಮಯದಲ್ಲಿ ಲಿಪಿಕಾರರ ಅವಶ್ಯಕತೆ ಇರುವ ಬಗ್ಗೆ ಅರ್ಜಿಯಲ್ಲಿನ ನಿಗದಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

ಅರ್ಜಿಯಲ್ಲಿ ಲಿಪಿಕಾರರ ಸೇವೆಯನ್ನು ಒದಗಿಸುವಂತೆ ಆಯ್ಕೆ ಸಮಿತಿಗೆ ಕೋರಿದ್ದಲ್ಲಿ, ಅವಶ್ಯಕತೆ ಅನುಸಾರ ಲಿಪಿಕಾರರನ್ನು ಒದಗಿಸುವಂತೆ ಸಂಬಂಧಿತ ಪರೀಕ್ಷಾ ಕೇಂದ್ರ ಮುಖ್ಯಸ್ಥರನ್ನು ಕೋರಲಾಗುವುದು.

## (11.3) ವಿಧವೆಯರು :

ವಿಧವೆಯರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆಗೆ ಪರಿಗಣಿಸಲು, ಅಭ್ಯರ್ಥಿಯು ತಾನು ವಿಧವೆಯೆಂದು ಹಾಗೂ ಮರು ಮದುವೆಯಾಗಿರುವುದಿಲ್ಲವೆಂದು ಪ್ರಮಾಣ ಪತ್ರವನ್ನು ತಹಶೀಲ್ದಾರರಿಂದ ಪಡೆದುಕೊಂಡು, ಜೆರಾಕ್ಸ್ ಅಪ್‌ಲೋಡ್ ಮಾಡುವುದು. ಸಂಸ್ಥೆಯು ಸೂಚಿಸಿದಾಗ ಮೂಲ ಪ್ರಮಾಣ ಪತ್ರವನ್ನು ಪರಿಶೀಲನೆಗೆ ಹಾಜರುಪಡಿಸಬೇಕು.

## (11.4) ಅನುಚ್ಛೇದ 371(ಜೆ) ರಂತೆ ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ :

ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ - ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿ ಕೋರುವ ಅಭ್ಯರ್ಥಿಗಳು ಅನುಬಂಧ - "ಎ" ರಲ್ಲಿ ಸೂಚಿಸಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಹಿ ಮತ್ತು ಮೊಹರು ಪಡೆದುಕೊಂಡಿರತಕ್ಕದ್ದು ಹಾಗೂ ಇದರ ಪ್ರತಿಯನ್ನು ಅನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

ಈ ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧ "ಎ" ರಡಿಯಲ್ಲಿ ತೋರಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಯು ರಾಜ್ಯ ಮಟ್ಟದ ಉಳಿಕೆ ವೃಂದದ ಹುದ್ದೆಗಳಿಗೂ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳು ಸ್ಥಳಿಯ ವೃಂದದ ಹುದ್ದೆಗೆ ಮತ್ತು ರಾಜ್ಯ ಮಟ್ಟದ ಉಳಿಕೆ ವೃಂದದ ಹುದ್ದೆಗಳಿಗೂ ಆಯ್ಕೆಯಾದಲ್ಲಿ, ಯಾವ ವೃಂದದ ಹುದ್ದೆಗೆ ಆಯ್ಕೆ ಬಯಸುವರೆಂಬುದನ್ನು ಆಯ್ಕೆಯಾದ ಸಂದರ್ಭದಲ್ಲಿ ಲಿಖಿತವಾಗಿ ಸಲ್ಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

ಅಭ್ಯರ್ಥಿಯು ಕೇವಲ ಒಂದು ಬಾರಿ ಮಾತ್ರ ಒಂದು ಜಿಲ್ಲೆಗೆ ಸೀಮಿತಗೊಳಿಸಿ ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

ಅರೆ ಸರ್ಕಾರಿ / ಖಾಸಗಿ ಸಂಸ್ಥೆಗಳು / ನಿಗಮ / ಮಂಡಳಿಗಳು ಹಾಗೂ ಇತರೆ ಸಂಸ್ಥೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸಂಬಂಧಪಟ್ಟವರಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸತಕ್ಕದ್ದು.

## 12) ವಿಶೇಷ ಸೂಚನೆ :

ಅಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ, ಅಪೂರ್ಣವಾದ ಭಾವಚಿತ್ರ ಹಾಗೂ ಅಪೂರ್ಣವಾದ ಸಹಿಯನ್ನು **UPLOAD** ಮಾಡಿದ ಅರ್ಜಿಗಳು ಹಾಗೂ ನಿಗದಿಪಡಿಸಿದ ಅರ್ಜಿ ಶುಲ್ಕ ಪಾವತಿಸದೇ ಇರುವ ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ. ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ **ON-LINE** ಮೂಲಕ ಅರ್ಜಿ ಭರ್ತಿ ಮಾಡಿ **UPLOAD** ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪಡೆದುಕೊಂಡಿರತಕ್ಕದ್ದು ಹಾಗೂ ಅದೇ ಮೀಸಲಾತಿ ಪ್ರಮಾಣ ಪತ್ರ / ಇತರೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಸಂದರ್ಶನಕ್ಕೆ / ಮೂಲ ದಾಖಲಾತಿಯ ಪರಿಶೀಲನೆಗೆ ಅರ್ಹರಾದಾಗ ಆ ಸಮಯದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕು.

ನಿಗದಿತ ನಮೂನೆಯಲ್ಲದೆ ಇತರೆ ನಮೂನೆಗಳಲ್ಲಿ ಅಥವಾ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದಲ್ಲಿ, ಇವರ ಮೀಸಲಾತಿಯನ್ನು ತಿರಸ್ಕರಿಸಲಾಗುವುದು / ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

**ಈ ನೇರ ನೇಮಕಾತಿ ಪ್ರಕಟಣೆಯು, ಕರ್ನಾಟಕ ಸರ್ಕಾರ / ಘನ ನ್ಯಾಯಾಲಯವು, ಒಳ ಮೀಸಲಾತಿ / ಮೀಸಲಾತಿಗೆ ಸಂಬಂಧಿಸಿದಂತೆ ಹೊರಡಿಸಬಹುದಾದ ಯಾವುದೇ ನಿರ್ದೇಶನ ಮತ್ತು ಆದೇಶಗಳಿಗೆ ಒಳಪಟ್ಟಿರುತ್ತದೆ.**

## 13) ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ತಪ್ಪದೇ ಆನ್-ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು. ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಮೂಲ ಪ್ರತಿಗಳನ್ನು ಹಾಜರುಪಡಿಸುವುದು.

1. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಕ್ಯುಮ್ಯೂಲೇಟಿವ್ ರೆಕಾರ್ಡ್ ಪ್ರತಿ ಅಥವಾ ಶಾಲಾ ವರ್ಗಾವಣೆ ಪ್ರಮಾಣ ಪತ್ರ.

2. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿಗಳು.

3. ಕೇಂದ್ರ / ರಾಜ್ಯ ಸರ್ಕಾರದ ಇಲಾಖೆಗಳಲ್ಲಿ / ಅರೆ ಸರ್ಕಾರಿ ಸಂಘ ಸಂಸ್ಥೆಗಳಲ್ಲಿ / ಇತರೆ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೆ ನಿರಾಕ್ಷೇಪಣಾ ಪತ್ರಗಳು.

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet. Bangalore-560 018

4. ಪರಿಶಿಷ್ಟ ಜಾತಿ ಪ್ರವರ್ಗ–ಎ, ಪರಿಶಿಷ್ಟ ಜಾತಿ ಪ್ರವರ್ಗ–ಬಿ, ಪರಿಶಿಷ್ಟ ಜಾತಿ ಪ್ರವರ್ಗ–ಸಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿಗಳ ಪ್ರಮಾಣ ಪತ್ರಗಳು ನಿಗದಿತ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ).

5. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು ನಮೂನೆ–2ರಲ್ಲಿ ಸಾಮಾನ್ಯ ಅಭ್ಯರ್ಥಿಗಳು.

   ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–2ರಲ್ಲಿ ಪರಿಶಿಷ್ಟ ಜಾತಿ ಪ್ರವರ್ಗ–ಎ, ಪರಿಶಿಷ್ಟ ಜಾತಿ ಪ್ರವರ್ಗ–ಬಿ, ಪರಿಶಿಷ್ಟ ಜಾತಿ ಪ್ರವರ್ಗ–ಸಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿಗೆ ಸೇರಿ ಅಭ್ಯರ್ಥಿಗಳು (ಮೀಸಲಾತಿ ಕೋರಿದ್ದಲ್ಲಿ).

6. ವಿಕಲಚೇತನರ ಮೀಸಲಾತಿ ಪ್ರಮಾಣ ಪತ್ರ.

7. ಕಂಪ್ಯೂಟರ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣ ಪತ್ರಗಳು.

8. ಅನುಚ್ಛೇದ 371(ಜೆ) ಮೇರೆಗೆ ಅರ್ಹತಾ ಪ್ರಮಾಣ ಪತ್ರ (ಅನುಬಂಧ – "ಎ"ರಲ್ಲಿ).

9. **ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳು, ಸಂದರ್ಶನ ವೇಳೆಯಲ್ಲಿ ಅವರು ಅರ್ಜಿಯೊಂದಿಗೆ ಸಲ್ಲಿಸಿರುವ (ಮೇಲಿನ 1 ರಿಂದ 8ರವರೆಗಿನ) ಎಲ್ಲಾ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಹಾಜರುಪಡಿಸತಕ್ಕದ್ದು.**

## 14) ಅಭ್ಯರ್ಥಿಗಳಿಗೆ ಹೆಚ್ಚುವರಿ ಮಾಹಿತಿ :

1. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಪೋಟೋ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಇಟ್ಟುಕೊಳ್ಳಲು ಸೂಚಿಸಿದೆ.

2. ಅಭ್ಯರ್ಥಿಯ ಹೆಸರು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ ಎಂಬುವುದರ ಆಧಾರದ ಮೇಲೆ ಅಭ್ಯರ್ಥಿಗೆ ನೇಮಕಾತಿಯ ಹಕ್ಕು ದೊರೆಯುವುದಿಲ್ಲ.

3. ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳಿಗೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಬೇಕು. ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೆ ಯಾವುದೇ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.

4. ಯಾವುದೇ ಸಂದರ್ಭದಲ್ಲಿ, ಯಾವುದೇ ಕಾರಣವನ್ನು ನೀಡದೇ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ, ತಡೆಹಿಡಿಯುವ, ಮುಂದೂಡುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

5. ಅಭ್ಯರ್ಥಿಯು ನಕಲಿ / ಖೋಟಾ / ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು / ತಪ್ಪು / ಸುಳ್ಳು ಹೇಳಿಕೆ ನೀಡಿ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿದ್ದಲ್ಲಿ, ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವವನೆಂದು / ಅನುಸರಿಸಲು ಪ್ರಯತ್ನಿಸಿದನೆಂದು ಹಾಗೂ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

ಅವಲಂಬಿಸಿರುವನೆಂದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯು ಕ್ರಿಮಿನಲ್ ಅಪರಾಧ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತನವನ್ನು ಕಳೆದುಕೊಳ್ಳುತ್ತಾನೆ.

ಇಂತಹ ಅಭ್ಯರ್ಥಿಗಳನ್ನು ಸಂಸ್ಥೆಯು ಮುಂದೆ ಮಾಡುವ ಯಾವುದೇ ನೇಮಕಾತಿಗೆ ಆಯ್ಕೆಯಾಗದಂತೆ ಖಾಯಂ ಆಗಿ ಉಚ್ಚಾಟಿಸಲಾಗುವುದು. (ಡಿಬಾರ್ ಮಾಡಲಾಗುವುದು)

## 15) ಭದ್ರತಾ ಠೇವಣಿ :

ಸೇವೆಗೆ ಆಯ್ಕೆಗೊಂಡ ಅಭ್ಯರ್ಥಿಗಳು ಸಂಸ್ಥೆಯು ನಿಗದಿಪಡಿಸುವ ಭದ್ರತಾ ಠೇವಣಿಯನ್ನು ಪಾವತಿಸಲು ಬದ್ಧರಿರತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018

## ನಮೂನೆ-(1)

**ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ**

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

**ಇವರಿಗೆ:**

**ತಹಶೀಲ್ದಾರರು,**
**_______ ತಾಲ್ಲೂಕು,**
**________ ಜಿಲ್ಲೆ.**

ಶ್ರೀ/ಶ್ರೀಮತಿ - - - - - - - - - - - - - ಎಂಬುವವರ ಮಗ/ಮಗಳು/ಪತಿ/ಪತ್ನಿ - - - - - ಆದ ನಾನು ಮೇಲುಸ್ತರದಲ್ಲಿ ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ/ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ)
5. ಅಭ್ಯರ್ಥಿಯ ಪ್ರಸ್ತುತ ವಿಳಾಸ (ಸ್ಪಷ್ಟವಾಗಿ ನಮೂದಿಸುವುದು)
6. ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ :

   ಮಾಧ್ಯಮಿಕ :

   ಪ್ರೌಢ :

7. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಜೀವಂತವಿಲ್ಲದಿದ್ದರೆ

   ಇವರ ಒಟ್ಟು ಆದಾಯ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ

   1) ವೇತನ ಶ್ರೇಣಿ :

   2) ಜಮೀನಿನ ವಿವರ :

   3) ಇತರ ಮೂಲಗಳು :

8. ಆದಾಯ ತೆರಿಗೆ ಪಾವತಿದಾರರೇ?

9. ಸಂಪತ್ತು ತೆರಿಗೆ ಪಾವತಿದಾರರೇ?

10. ಮಾರಾಟ ತೆರಿಗೆ ಪಾವತಿದಾರರೇ?

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.

**ಪ್ರಮಾಣೀಕೃತ ಘೋಷಣೆ**

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ/ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

**ಸ್ಥಳ:** **ತಮ್ಮ ವಿಧೇಯ**
**ದಿನಾಂಕ:** **(ಅಭ್ಯರ್ಥಿಯ ಸಹಿ)**

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತಾ, ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

**ಸ್ಥಳ:** **ತಂದೆ/ತಾಯಿ/ಪೋಷಕರ ಸಹಿ**
**ದಿನಾಂಕ:** **(ತಂದೆ/ತಾಯಿ/ಪೋಷಕರು ಜೀವಂತವಿಲ್ಲದಿದ್ದಲ್ಲಿ ಹೆಂಡತಿ/ಗಂಡ ಇವರ ಸಹಿ)**

**ಸ್ಥಳೀಯ ಇಬ್ಬರು ಸಾಕ್ಷಿದಾರರು**

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರ/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

**ಸಾಕ್ಷಿದಾರರ ಸಹಿ**
**(ಪೂರ್ಣ ವಿಳಾಸದೊಂದಿಗೆ)**

1)

2)

**ಪರಿಶೀಲನಾ ಪ್ರಮಾಣ ಪತ್ರ**

1. ಶ್ರೀ/ಶ್ರೀಮತಿ – – – – – – – – – – – – – ಎಂಬುವವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ – – – – – ಎಂಬುವವರು ಕರ್ನಾಟಕ ರಾಜ್ಯದ – – – – – – – ಜಿಲ್ಲೆಯ ವಿಭಾಗ– – – – – – – – – ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.
2. ಶ್ರೀ/ಶ್ರೀಮತಿ/ಕುಮಾರಿ – – – – – ಇವರ ತಂದೆ/ತಾಯಿ/ಪೋಷಕರ/ಪತಿ/ಪತ್ನಿ ಇವರು ಸರ್ಕಾರಿ ಆದೇಶ ಸಂಖ್ಯೆ:ಎಸ್.ಡಬ್ಲ್ಯೂಡಿ 251/ಬಿ.ಸಿ.ಎ./94, ಬೆಂಗಳೂರು, ದಿನಾಂಕ 31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamylayer) ಬರುವುದಿಲ್ಲವೆಂದು ಪ್ರಮಾಣಿಕರಿಸಲಾಗಿದೆ.

**ಸ್ಥಳ :** **ಸಹಿ**
**ದಿನಾಂಕ :** **ತಹಶೀಲ್ದಾರ್--------**
**(ತಾಲ್ಲೂಕು ಕಛೇರಿಯ ಮೊಹರು)**

**ಸೂಚನೆ:**

1. ಇದರಲ್ಲಿ ಉಪಯೋಗಿಸಲಾದ 'ಸಾಮಾನ್ಯ ನಿವಾಸಿ' ಎಂಬ ಪದವು 1950 ರಿಂದ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದಲ್ಲಿನ ಅರ್ಥವನ್ನು ಹೊಂದಿರುತ್ತದೆ.
2. ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ ಎಸ್. ಡಬ್ಲ್ಯೂಡಿ 251 /ಬಿ.ಸಿ.ಎ/94, ಬೆಂಗಳೂರು, ದಿನಾಂಕ 31.01.1995 ರನ್ವಯ ಮೇಲುಸ್ತರದಲ್ಲಿ(Creamylayer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalo...

## ನಮೂನೆ – 2

## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ – – – – – – – – – – – – – – ರವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ – – – – – – ಇಲ್ಲಿ ---- – ತಾಲ್ಲೂಕು – – – – – – ಗ್ರಾಮದಲ್ಲಿ – – – – – ವಾಸವಾಗಿರುವ ಇವರು ಒಂದನೇ ತರಗತಿಯಿಂದ – – – – – – – – – – – ತರತಿಯವರೆಗೆ – – – – – – – ಇಲ್ಲಿ ----- ತಾಲ್ಲೂಕು – – – – – – ಪಟ್ಟಣ – – – – – – – – – – – ಶಾಲೆಯಲ್ಲಿ ವ್ಯಾಸಂಗ ಮಾಡಿ – – – – – – – ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯ ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

**ಮೇಲು ರುಜು ಕ್ಷೇತ್ರ ಶಿಕ್ಷಣ ಅಧಿಕಾರಿ ಕಛೇರಿಯ ಮೊಹರು**

**ಮುಖ್ಯೋಪಾಧ್ಯಾಯರ ಸಹಿ ಮತ್ತು ಸಂಸ್ಥೆಯ ಮೊಹರು**

**ಸ್ಥಳ :**
**ದಿನಾಂಕ :**

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bengaluru

**(ಪ.ಜಾ ಪ್ರ–ಎ, ಪ.ಜಾ ಪ್ರ–ಬಿ, ಪ.ಜಾ ಪ್ರ–ಸಿ/ಪ.ಪಂ.ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ–ಡಿ**

**(ನಿಯಮ 3ಎ (2) (3) ನೋಡಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ ಪ್ರ–ಎ, ಪ.ಜಾ ಪ್ರ–ಬಿ, ಪ.ಜಾ ಪ್ರ–ಸಿ/ಪ.ಪಂ.) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

**ಪ್ರಮಾಣ ಪತ್ರ**

– – – – ರಾಜ್ಯದ/ಕೇಂದ್ರಾಡಳಿತ ಪ್ರದೇಶದ – – – – ಜಿಲ್ಲೆಯ/ವಿಭಾಗದ – – – – – – – ಗ್ರಾಮ/ಪಟ್ಟಣದ ನಿವಾಸಿಯಾದ ಶ್ರೀ/ಶ್ರೀಮತಿ – – – – – – – – – – – – ಎಂಬುವವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ – – – – – – – – ಇವರು ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟು ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ ಸೇರಿದವರಾಗಿರುತ್ತಾರೆಂದು ಪ್ರಮಾಣಿಕರಿಸಿದೆ.

ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ 1950

ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ 1950

ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ 1950

ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ 1950

ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ 1951

ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಡು) ಆದೇಶ 1958 ಮುಂಬಯಿ ರಾಜ್ಯ ಪುನರ್ ರಚನಾ ಅಧಿಯಮ, 1960, ಪಂಜಾಬ್ ರಾಜ್ಯಪುನರ್ ರಚನಾ ಅಧಿಯಮ,1986, ಹಿಮಾಚಲ್ ಪ್ರದೇಶ ರಾಜ್ಯ ರಚನಾ ಅಧಿಯಮ, 1970 ಮತ್ತು ಈಶಾನ್ಯ ರಾಜ್ಯಗಳ ಪುನರ್ ರಚನಾ ಅಧಿಯಮ, 1971 ರ ಮೂಲ ತಿದ್ದುಪಡಿಯಾದಂತೆ)

ಸಂವಿಧಾನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ,

1978ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ)

ಅನುಸೂಚಿತ ಬುಡಕಟ್ಟುಗಳ ಪ್ರದೇಶ 1959

ಸಂವಿಧಾನ (ದಾದರ್ ಮತ್ತು ನಾಗರಹವೇಲಿ)ಅನುಸೂಚಿತ ಜಾತಿಗಳು ಆದೇಶ 1962

ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳು ಆದೇಶ 1984

ಸಂವಿಧಾನ ಅನುಸೂಚಿತ ಜಾತಿಗಳು ಉತ್ತರ ಪ್ರದೇಶ ಆದೇಶ 1967

ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ 1950

ಸಂವಿಧಾನ (ಗೋವಾ, ದಾಮನ್ ಮತ್ತು ಡಿಯೂ)ಅನುಸೂಚಿತ ಜಾತಿ ಆದೇಶ 1988

ಸಂವಿಧಾನ (ನಾಗಲ್ಯಾಂಡ್)ಅನುಸೂಚಿತ ಬುಡಕಟ್ಟುಗಳ ಆದೇಶ

ಶ್ರೀ/ಶ್ರೀಮತಿ – – – – – – – – – – – – – ಎಂಬುವವರ ಮಗ/ಮಗಳು/ಪತಿ/ಪತ್ನಿ ಶ್ರೀ/ಶ್ರೀಮತಿ/ಕುಮಾರಿ – – – – – – ಎಂಬುವವರು ಕರ್ನಾಟಕ ರಾಜ್ಯ / ಕೇಂದ್ರಾಡಳಿತ ಪ್ರದೇಶದ ಜಿಲ್ಲೆಯ/ವಿಭಾಗ – – – – – – – – ಜಿಲ್ಲೆಯ ವಿಭಾಗ– – – – – – – – – ಗ್ರಾಮ/ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ.

**ಸಹಿ**

**ಸ್ಥಳ:** **ತಹಶೀಲ್ದಾರ್ –– – – – –**

**ದಿನಾಂಕ:** **(ಕಛೇರಿಯ ಮೊಹರಿನೊಂದಿಗೆ)**

**ವ್ಯವಸ್ಥಾಪಕ ನಿರ್ದೇಶಕರು**

MANAGING DIRECTOR
Karnataka State Co-operative
Consumers Federation Ltd,
Chamarajpet, ...

**ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ**

**ನಮೂನೆ–ಇ**

**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1ಕ್ಕೆ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

– – – – – ಗ್ರಾಮ/ಪಟ್ಟಣದ/ನಗರ ನಿವಾಸಿಯಾದ ಶ್ರೀ/ಶ್ರೀಮತಿ – – – – – – – – – – – ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ – – – – – – – – ಇವರು ಹಿಂದುಳಿದ ವರ್ಗಗಳಿಗೆ (ಪ್ರವರ್ಗ) – – – – – – – ಜಾತಿಯ – – – – – – ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣಿಕರಿಸಲಾಗಿದೆ.

**ಸಹಿ**

**ಸ್ಥಳ :** **ತಹಶೀಲ್ದಾರ್ – – – – – –**

**ದಿನಾಂಕ :** **(ಕಛೇರಿಯ ಮೊಹರಿನೊಂದಿಗೆ)**

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd,
Chamarajpet, Bangalore

**(ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ**

**ನಮೂನೆ – ಎಫ್**

**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಪ್ರಮಾಣ ಪತ್ರ**

– – – – – – – –ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ – – – – – – – – – – – ಇವರ ಮಗ/ಮಗಳು/ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ – – – – – – – – ಇವರ ಮತ್ತು ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಸರ್ಕಾರಿ ಆದೇಶಗಳ ಸಂಖ್ಯೆ ಎಸ್.ಡಬ್ಲ್ಯೂಡಿ225 ಬಿಸಿಎ 2000 ದಿನಾಂಕ 30–03–2002 ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ತರದ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು

ಅಭ್ಯರ್ಥಿಯಾಗಲಿ ಅಥವಾ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿ ಯಾಗಲಿ ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು

ಅಥವಾ

ಸಾರ್ವಜನಿಕರ ವಲಯ ಉದ್ಯಮದಲ್ಲಿ ತತ್ಸಮಾನ ಹುದ್ದೆಯನ್ನು ಹೊಂದಿರುವುದಿಲ್ಲ

ಅಥವಾ

ಖಾಸಗಿ ನಿಯೋಜಕರ ಕೆಳಗೆ 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯ ಆದಾಯವು ಎಂಟು ಲಕ್ಷ ಮೀರುವುದಿಲ್ಲವೆಂದು

ಅಥವಾ

ಕರ್ನಾಟಕ ಭೂ ಸುಧಾರಣ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯು ಅಥವಾ ಇವರಿಬ್ಬರೂ 10 ಯೂನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶಗಳ ಸಂಖ್ಯೆ ಎಸ್.ಡಬ್ಲ್ಯೂಡಿ225 ಬಿಸಿಎ 2000 ದಿನಾಂಕ 30–03–2002 ರನ್ವಯ ಹಿಂದುಳಿದ ವರ್ಗಗಳ ಪ್ರವರ್ಗ – – – – (2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

**ಸಹಿ**

**ಸ್ಥಳ :** **ತಹಶೀಲ್ದಾರ್ – – – – – –**

**ದಿನಾಂಕ :** **(ಕಛೇರಿಯ ಮೊಹರಿನೊಂದಿಗೆ)**

**ಸೂಚನೆ :**

1) ಸರ್ಕಾರದ ಆದೇಶದ ಸಂಖ್ಯೆ: ಹಿಂವಕ 304 ಬಿಸಿಎ 2015 ದಿನಾಂಕ 14.09.2018 ರಂತೆ ಹಿಂದುಳಿದ ವರ್ಗಗಳ ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆ ನಿಗದಿಪಡಿಸಿರುವ ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರ/ಪತಿ/ಪತ್ನಿಯ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Annual Income) ರೂ.8.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ ಮೀಸಲಾತಿ ಪ್ರಮಾಣ ಪತ್ರವನ್ನು ನೀಡುವ ಅಧಿಕೃತ ಅಧಿಕಾರಿಯು ದಿನಾಂಕ 14.09.2018ರ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಕೊಂಡ ನಂತರವೇ ನೀಡತಕ್ಕದ್ದು.
2) ಈ ಮೇಲೆ ಹೇಳಲಾದ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸದರಿ ಮೀಸಲಾತಿ ಯನ್ನು ಕ್ಲೈಂ ಮಾಡುವ ಅಭ್ಯರ್ಥಿಗಳು ಅದರಂತೆ ಜಾತಿ/ಮೀಸಲಾತಿ/ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕರು

MANAGING DIRECTOR
Karnataka State Co-operative
Consumers Federation Ltd.
Chamarajpet, Bangalore

# CERTIFICATE FOR THE PERSONS WITH DISABILITIES

This is to certify that Sri/Smt/Kum. . . . . . . . . . . . . . . Son/wife/daughter of Shri. . . . . . . . . . . . . Age.. .. . . old, male/female, Registration No.. . . . . . . . . is a case of . . . . . . He/she is physically disabled/visual disabled/speech & hearing disaled and has. . . . . . % (. . . . .percent).

Permanent (physical imparment visual impairment speech & hearing impairment) in relation to his/her. . . . . .

Note:

1. This condition is progressive/non- progressive/likely to improve/not likely to improve.
2. Re. assessment is not recommended/ is recommended of. . . . . . . . monthly/years Strike out which is not applicable.

(recent attested photograph showing The disability affixed here)

| (Doctor) | (Doctor) | (Doctor) |
|---|---|---|
| Orthopedie/Eye/ ENT/Phychiatrist Member, Medical Board | Senior Specialist Member, Medical Board | Chairperson District Surgeon District Hospital |

Counter signed by the medical superintendent / CM / Head of hospital (with seal)

Signature / thump impression of the disabled person

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet. Bangalore-560 018

**ಪ್ರಸ್ತುತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ನಿರಾಕ್ಷೇಪಣಾ/ಅನುಮತಿ ಪ್ರಮಾಣ ಪತ್ರ**

**ಸಂಖ್ಯೆ : ---------------** **ದಿನಾಂಕ: -------**

ಶ್ರೀ / ಶ್ರೀಮತಿ – – – – – – – – – – – – ಇವರ ತಂದೆ– – – – – – ಇವರು – – – – ರಾಜ್ಯ / ಕೇಂದ್ರ ಸರ್ಕಾರ / ಸಂಘ / ಸಂಸ್ಥೆಯಲ್ಲಿ ದಿನಾಂಕ – – – – –– ರಿಂದ – – – – ರವರೆಗೆ – – – – – – – ಹುದ್ದೆಯಲ್ಲಿ ಖಾಯಂ / ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರು ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳ ನಿ., ನೇಮಕಾತಿ ಅಧಿಸೂಚನೆಯಂತೆ ಅಹ್ವಾನಿಸಿರುವ – – – – – – ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

**ನೇಮಕಾತಿ ಪ್ರಾಧಿಕಾರಿಯ ಸಹಿ**
**ಸಂಸ್ಥೆಯ ಹೆಸರು ಮತ್ತು ಮೊಹರು**

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 ...

## ಅನುಬಂಧ – ಎ

## ಅರ್ಹತಾ ಪ್ರಮಾಣ ಪತ್ರ

**ಅನುಚ್ಛೇದ 371 (ಜೆ) ಮೇರೆಗೆ)**
**(3(3)ನೇ ನಿಯಮ ನೋಡಿ)**

**ಪ್ರಮಾಣ ಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013**

ಶ್ರೀ/ಶ್ರೀಮತಿ – – – – – – – – – – – ರವರು – – – – – ರವರ ಮಗ/ಮಗಳು/

ಪತಿ/ಪತ್ನಿಯಾಗಿದ್ದು ಇವರು ಕರ್ನಾಟಕ ರಾಜ್ಯದ – – – – – ಜಿಲ್ಲೆಯ – – – – – ತಾಲ್ಲೂಕಿನ

– – – – – – – – ಗ್ರಾಮ/ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಹೆಸರು– – – – –
ಅಸಿಸ್ಟೆಂಟ್ ಕಮೀಷನರ್
– – – – – –– – ಉಪ ವಿಭಾಗ
– – – –ಜಿಲ್ಲೆ

ಸ್ಥಳ:
ದಿನಾಂಕ:

ವ್ಯವಸ್ಥಾಪಕ ನಿರ್ದೇಶಕರು
MANAGING DIRECTOR
Karnataka State Co-operative
Consumers Federation Ltd.
Chamarajpet, Bangalore-560 018